


ಚಿತ್ರ: ಬಿ.ಕೆ. ಸೋಮಶೇಖರ

ಈಜು ಬಾರದ ಸಣ್ಣ ಬಾಲಕನೊಬ್ಬನು ನದಿಯಲ್ಲಿ ಮುಳುಗಿ ಹೋಗುತ್ತಿದ್ದನು. ಅವನು ಸಹಾಯಕ್ಕಾಗಿ ಜೋರಾಗಿ ಕೂಗಿಕೊಳ್ಳಲು ಪ್ರಾರಂಭಿಸಿದನು. ಕೂಗನ್ನು ಕೇಳಿ ಅದೇ ದಾರಿಯಲ್ಲಿ ಹೋಗುತ್ತಿದ್ದ ಒಬ್ಬರು ಸಾಧು ತಕ್ಷಣವೇ ನದಿಗೆ ಧುಮುಕಿ ಬಾಲಕನನ್ನು ಸಾವಿನ ದವಡೆಯಿಂದ ಕಾಪಾಡಿದರು. ಇನ್ನೇನು ಆ ಸಾಧು ಹಿಂದಿರುಗಿ ಹೊರಡುವಷ್ಟರಲ್ಲಿ ಆ ಸಣ್ಣ ಬಾಲಕನು "ಧನ್ಯವಾದಗಳು" ಎಂದನು. ಸಾಧು ಕೇಳಿದರು: "ಧನ್ಯವಾದವನ್ನು ತಿಳಿಸುವ ಕಾರಣವೇನು?" ಬಾಲಕ ಉತ್ತರಿಸಿದ, "ನನ್ನ ಪ್ರಾಣವನ್ನು ತಾವು ಕಾಪಾಡಿದ ಸಲುವಾಗಿ." ಆಗ ಆ ಸಾಧು ಬಾಲಕನನ್ನು ಹತ್ತಿರ ಸೆಳೆದು, ಪ್ರೀತಿ ತುಂಬಿದ ದೃಢವಾದ ಕಂಠದಿಂದ ಹೇಳಿದರು: "ಮಗುವೆ, ನಾನು ನಿನ್ನನ್ನು ಇಂದು ರಕ್ಷಿಸಿರುವೆ. ಈ ಶ್ರಮಕ್ಕೆ ಸಾರ್ಥಕವಾದ ಜೀವನವನ್ನು ನೀನು ಮುಂದೆ ನಡೆಸಬೇಕು!" ✪



## ಕಿವುಡು ಕಪ್ಪೆ

ಒಂದಷ್ಟು ಕಪ್ಪೆಗಳು ಕುಪ್ಪಳಿಸುತ್ತಾ ಹೊರಟಿದ್ದವು. ಪಕ್ಕದಲ್ಲಿ ಒಂದು ಆಳದ ಹೊಂಡವಿತ್ತು. ಅದರಲ್ಲಿ ನೀರೂ ಇರಲಿಲ್ಲ. ಆಕಸ್ಮಿಕವಾಗಿ ಮೂರೂ ಕಪ್ಪೆಗಳೂ ಅದರಲ್ಲಿ ಬಿದ್ದುಬಿಟ್ಟವು. ನೀರಿಲ್ಲದ ಹೊಂಡದಿಂದ ಅವುಗಳು ಮೇಲಕ್ಕೆ ಬರುವುದು ಕಷ್ಟವಿತ್ತು.



ಮೇಲಿದ್ದ ಕಪ್ಪೆಗಳು ಇವರ ಕಷ್ಟವನ್ನು ನೋಡುತ್ತಿದ್ದುವು. ಕೆಲವು "ನೀವು ಮೇಲಕ್ಕೆ ಬರಲು ಆಗದು" ಎಂದವು. ಆ ಮೂರೂ ಕಪ್ಪೆಗಳು ಹೊಂಡದಿಂದ ಹೊರಕ್ಕೆ ಬರಲು ಕುಪ್ಪಳಿಸಿ ಹಾರತೊಡಗಿದವು. ಮೇಲಿದ್ದ ಕಪ್ಪೆಗಳಿಗೆ ಅವುಗಳ ಯತ್ನವು ವ್ಯರ್ಥ ಎನ್ನಿಸಿತು. "ಸುಮ್ಮನೇ ಸುಸ್ತು ಮಾಡಿಕೊಳ್ಳುತ್ತಿದ್ದೀರಿ" ಎಂದುವು. ಮತ್ತೆ ಕೆಲವು "ನೀವುಗಳು ಹೊಂಡದಲ್ಲೇ ಇರಬೇಕಾದೀತು" ಎಂದುವು. ಒಂದೇ ಒಂದು ಕಪ್ಪೆಯೂ ಪ್ರೋತ್ಸಾಹದ ಮಾತನ್ನು ಆಡಲಿಲ್ಲ. ಬದಲು, ಧೈರ್ಯಗುಂದಿಸುವ ಮಾತುಗಳನ್ನೇ ಹೇಳುತ್ತಿದ್ದುವು.

ಅವನ್ನು ಕೇಳಿ ಕೇಳಿ ಎರಡು ಕಪ್ಪೆಗಳು ಜಿಗಿಯುವುದನ್ನು ನಿಲ್ಲಿಸಿಯೇ ಬಿಟ್ಟವು. ಆದರೆ, ಮೂರನೆಯದು ಮಾತ್ರ, ಪ್ರಯತ್ನ ನಿಲ್ಲಿಸಲಿಲ್ಲ. ಕಡೆಗೂ ಆ ಹೊಂಡದಿಂದ ಜಿಗಿದು ಮೇಲಕ್ಕೆ ಬಂದೇ ಬಿಟ್ಟಿತು. ಆಗ, ಉಳಿದವು ಅದಕ್ಕೆ 'ಜಯಕಾರ' ಕೂಗತೊಡಗಿದವು. ಆಗಲೂ, ಅದು ಕೇಳಿಸದಂತೆ ಸುಮ್ಮನಿತ್ತು. ಏಕೆಂದರೆ, ಅದು ಕಿವುಡು ಕಪ್ಪೆಯಾಗಿತ್ತು! ಅದರ ಸತತ ಪ್ರಯತ್ನಕ್ಕೆ, ಇವುಗಳ ಅಧೈರ್ಯದ ನುಡಿಗಳು ಅಡ್ಡಿ ಬಂದಿರಲಿಲ್ಲ.

**ಕಥೆ : ಡಿ.ವಿ. ಮೋಹನ ಪ್ರಕಾಶ್, ಮೈಸೂರು**

**ಚಿತ್ರ: ಪಿ.ಪುರುಷೋತ್ತಮ ಕಾರಂತ**